ನಿಮ್ಮೊಡನೆ

# ಈ ಕೊಲೆಗಳಿಗೆ ಅರ್ಥವಿದೆಯೆ?

ಮನುಷ್ಯ ಜೀವ ಇಷ್ಟೊಂದು ಅಗ್ಗವಾದರೆ ಹೇಗೆ? ಜಾತೀಯ ಮತ್ತು ಧರ್ಮಾಂಧ ವಿಷಮನಸ್ಸುಗಳು ಸಂವಿಧಾನದತ್ತ ಸಮಾನತೆಯ ಆಶಯವನ್ನು ಗಾಳಿಗೆ ತೂರುತ್ತಿರುವುದನ್ನು ತಡೆಯಲು ಸರಕಾರಕ್ಕೂ ಸಾಧ್ಯವಾಗುತ್ತಿಲ್ಲ ಎನ್ನುವುದು ನಿಜಕ್ಕೂ ಆತಂಕ ಹುಟ್ಟಿಸುವ ವಿಷಯ.

ವಿದ್ಯಾಭ್ಯಾಸದ ಮಟ್ಟ ಹೆಚ್ಚಿ, ಸಮಾಜದ ಎಲ್ಲ ವರ್ಗದ ಜನರಿಗೂ ಆರ್ಥಿಕ ಭದ್ರತೆ ಒದಗಿಸಿದ ಬಳಿಕ ಜಾತಿ ತಾರತಮ್ಯ ತಾನಾಗಿಯೇ ಮರೆಯಾಗುತ್ತದೆ ಎಂದು ಭಾವಿಸಿದ್ದು ಸುಳ್ಳಾಗಿದೆ. ಅಕ್ಷರ ಜ್ಞಾನ, ಶ್ರೀಮಂತಿಕೆ, ಆಧುನಿಕ ಸೌಲಭ್ಯಗಳ ಹೊರತಾಗಿಯೂ ಅಂತರಜಾತಿ ವಿವಾಹಿತರ ಸಂಕಷ್ಟಗಳು ಇನ್ನಷ್ಟು ಹೆಚ್ಚಾಗಿವೆ. ದಲಿತ ಯುವಕರನ್ನು ಮದುವೆಯಾದ ಕೆಳಜಾತಿಯ ಹೆಣ್ಣುಮಕ್ಕಳನ್ನು ಬೆಂಕಿ ಹಚ್ಚಿ ಕೊಲ್ಲುವಂತಹ ಬರ್ಬರ ಕೃತ್ಯಗಳು ಈಗಲೂ ನಡೆಯುತ್ತಿವೆಯೆಂದರೆ ನಾವಿನ್ನೂ ಯಾವ ಯುಗದಲ್ಲಿ ವಾಸಿಸುತ್ತಿದ್ದೇವೆ? 'ಮನುಷ್ಯ ಕುಲ ತಾನೊಂದೆ ವಲಂ' ಎಂದು ಹೇಳಿದ ಪಂಪನಿಂದ ಹಿಡಿದು, ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಮುಂತಾದ ದಾರ್ಶನಿಕರು ಜೀವಿಸಿ ತೋರಿಸಿಕೊಟ್ಟ ಜೀವನಮಾರ್ಗದ ಬಗ್ಗೆ ನಾವಾಡುವ ಮಾತುಗಳೆಲ್ಲ ಬರೀ ಬೊಗಳೆಯೆ? ಆಧುನಿಕತೆಯ ಸೌಲಭ್ಯಗಳು ಹೆಚ್ಚಾದಂತೆ ಜಾತಿಪದ್ಧತಿ ಏಕೆ ಇನ್ನಷ್ಟು ಘನೀಭೂತವಾಗುತ್ತಿದೆ? ಗಲ್ಲಿ ಗಲ್ಲಿಗೂ ಮಠಾಧೀಶರು, ಧರ್ಮಗುರುಗಳಿದ್ದಾರೆ; ಅನುದಿನವೂ ಪೂಜೆ, ಪುನಸ್ಕಾರ, ಪ್ರವಚನಗಳು ನಡೆಯುತ್ತವೆ. ಜನರ ಧಾರ್ಮಿಕ ಪ್ರಜ್ಞೆ ಉತ್ತುಂಗಕ್ಕೇರಿದೆ. ಇಷ್ಟಾಗಿಯೂ ಜಾತಿಯ ಹೆಸರಿನಲ್ಲಿ ಹೆಣ್ಣುಮಕ್ಕಳ ಹತ್ಯೆ ನಿರಂತರವಾಗಿ ನಡೆಯುತ್ತಿರುವುದು ಏನನ್ನು ಸೂಚಿಸುತ್ತದೆ?

ಮೈಸೂರಿನಲ್ಲಿ ದಲಿತ ಯುವಕನನ್ನು ಮದುವೆಯಾದ ಮೇಲ್ಜಾತಿಯ ಕಾಲೇಜು ಉಪನ್ಯಾಸಕಿಯನ್ನು ಆಕೆಯ ಸೋದರನೇ ಕೊಲೆ ಮಾಡಿದ್ದಾನೆ. ಮದ್ದೂರು ತಾಲ್ಲೂಕಿನಲ್ಲಿ ದಲಿತ ಯುವಕನನ್ನು ಪ್ರೀತಿಸಿದ ಮೇಲ್ಜಾತಿಯ ಯುವತಿಯನ್ನು ಆಕೆಯ ತಂದೆ ಮತ್ತು ಬಂಧುಗಳು ಸೇರಿ ಕೊಲೆ ಮಾಡಿದ್ದಾರೆ. ಹಾವೇರಿಯ ಹಾನಗಲ್ ತಾಲ್ಲೂಕಿನಲ್ಲಿ ದಲಿತ ಹುಡುಗನನ್ನು ಪ್ರೀತಿಸಿ ಮದುವೆಯಾದ ಕಾರಣಕ್ಕೆ ಮೇಲ್ಜಾತಿಯ ಹುಡುಗಿಗೆ ನಿರಂತರ ಅವಮಾನ ಮತ್ತು ಕಿರುಕುಳ ನೀಡಲಾಗಿದೆ. ಅಂತರಜಾತಿ ವಿವಾಹವಾದ ಮದ್ದೂರು ಬಳಿ ಗ್ರಾಮವೊಂದರ ದಂಪತಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವ ಗ್ರಾಮಸ್ಥರು ಅದಕ್ಕೆ ವಿನಾಯ್ತಿ ನೀಡಲು ಹಲವು ವರ್ಷಗಳಿಂದ ದಂಡ ವಸೂಲಿ ಮಾಡುತ್ತಿದ್ದಾರೆ. ಇವಿಷ್ಟು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗಿ ಗಮನ ಸೆಳೆದ ಪ್ರಕರಣಗಳು. ಜಾತಿಭೂತದ ಒತ್ತಡಕ್ಕೆ, ಕಿರುಕುಳಕ್ಕೆ ಯಾವ ಪ್ರತಿಭಟನೆಯನ್ನೂ ಮಾಡದೆ, ಸದ್ದಿಲ್ಲದೆ ಬಲಿಯಾದ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟಿದೆಯೋ ಗೊತ್ತಿಲ್ಲ. ಜಾತ್ಯತೀತ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಅಂತರಜಾತೀಯ ಮದುವೆಗಳಿಗೆ ಪ್ರೋತ್ಸಾಹ ಕೊಡುವುದು ಬಿಡಿ, ಅಂತರಜಾತಿ ವಿವಾಹಿತರಿಗೆ ರಕ್ಷಣೆಯೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ರಾಜಕೀಯ ಮತ್ತು ಜಾತೀಯ ಶಕ್ತಿಗಳ ಒತ್ತಡಕ್ಕೆ ಮಣಿಯುವ ಪೊಲೀಸರು ಇಂತಹ ಜೋಡಿಗಳಿಗೆ ರಕ್ಷಣೆ ನಿರಾಕರಿಸುತ್ತಾರೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಮಾಜ ಇಂದು ಹೆಚ್ಚು ಮಹತ್ವ ಕೊಡುತ್ತಿದೆ ಎನ್ನುವುದು ನಿಜ. ಆದರೆ ಆ ಶಿಕ್ಷಣವೂ ಹೆಣ್ಣುಮಕ್ಕಳ ವಿರುದ್ಧದ ಕ್ರೌರ್ಯವನ್ನು ತಡೆಯಲು ನೆರವಾಗುತ್ತಿಲ್ಲ.

ಇದರ ಮಧ್ಯೆ ಧರ್ಮಾಂಧತೆಯ ಕ್ರೌರ್ಯವೂ ಎದ್ದು ನಿಂತಿದೆ. ಮುಳಬಾಗಿಲಿನಲ್ಲಿ ಕುಡಿದ ಅಮಲಿನಲ್ಲಿ ಮಸೀದಿಯೊಳಗೆ ಹೋಗಿ ಧರ್ಮಗ್ರಂಥವನ್ನು ಹರಿದು ಹಾಕಿದ ಯುವಕನನ್ನು ಅದೇ ಧರ್ಮದ ಯುವಕರು ಥಳಿಸಿ ಕೊಲೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಮನೆಯ ಬಳಿ ಮಸೀದಿ ಕಟ್ಟುವುದಕ್ಕೆ ಆಕ್ಷೇಪವೆತ್ತಿದ ಹಿರಿಯನೊಬ್ಬನನ್ನು ಕೂಡಾ ಕೊಲೆ ಮಾಡಲಾಗಿದೆ. ಮಾನವೀಯತೆಯನ್ನು ಬೋಧಿಸುವ ಧರ್ಮಗ್ರಂಥದ ಅನುಯಾಯಿಗಳು, ಈ ಅಮಾನವೀಯ ಕೃತ್ಯವನ್ನು ಖಂಡಿಸುವ ಒಂದು ಮಾತನ್ನೂ ಆಡಿಲ್ಲ! ಜಾತಿ ಮತ್ತು ಧರ್ಮಗಳು ಮನುಷ್ಯರನ್ನು ಮೃಗವನ್ನಾಗಿಸುತ್ತಿವೆ ಎನ್ನುವುದಕ್ಕೆ ಇತ್ತೀಚಿನ ದಿನಗಳಲ್ಲಿ ಇಂತಹ ಹೇರಳ ಉದಾಹರಣೆಗಳು ಸಿಗುತ್ತಿವೆ. ಮನುಷ್ಯ ಜೀವ ಇಷ್ಟೊಂದು ಅಗ್ಗವಾದರೆ ಹೇಗೆ? ಜಾತೀಯ ಮತ್ತು ಧರ್ಮಾಂಧ ವಿಷಮನಸ್ಸುಗಳು ಸಂವಿಧಾನದತ್ತ ಸಮಾನತೆಯ ಆಶಯವನ್ನು ಗಾಳಿಗೆ ತೂರುತ್ತಿರುವುದನ್ನು ತಡೆಯಲು ಸರಕಾರಕ್ಕೂ ಸಾಧ್ಯವಾಗುತ್ತಿಲ್ಲ ಎನ್ನುವುದು ನಿಜಕ್ಕೂ ಆತಂಕ ಹುಟ್ಟಿಸುವ ವಿಷಯ.

ಇಂತಹ ಪ್ರಕರಣಗಳನ್ನು 'ಬಿಡಿ ಪ್ರಕರಣ'ಗಳೆಂದು ಸರಕಾರ ಮತ್ತು ಸಮಾಜ ನಿರ್ಲಕ್ಷಿಸಬಾರದು. ಅಮಾನುಷ ಕೊಲೆ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಂಡು ಕಠಿಣ ಶಿಕ್ಷೆ ವಿಧಿಸುವಂತಾಗಬೇಕು. ಜಾತಿ–ಮತದ ಭೇದವಿಲ್ಲದ, ಗಂಡು– ಹೆಣ್ಣು ತಾರತಮ್ಯವಿಲ್ಲದ ಸಂವಿಧಾನದ ಸಮಾನತೆಯ ಆಶಯಗಳನ್ನು ಎಲ್ಲರೂ ಗೌರವಿಸುವಂತಾಗಬೇಕು.

■ ಬಿ.ಎಂ.ಹನೀಫ್

